ಅ.ದಾ. ನಂ.294/16                                        ಡಿ .ಡಬ್ಲ್ಯೂ-3

ದಿನಾಂಕಃ 03.06.2026 ರಂದು ಡಿ.ಡಬ್ಲ್ಯೂ-3 ರವರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

1. ನಾನು ಪದವೀಧರ. ಈ ದಾವೆ ಬಗ್ಗೆ ಮಾಹಿತಿ ಇರುತ್ತದೆ. ದಾವಾ ಸ್ವತ್ತು ಮತ್ತು ಪ್ರತಿವಾದ ಪತ್ರದ ಬಗ್ಗೆ ತಿಳಿದುಕೊಂಡಿರುತ್ತೇನೆ. ಸ.ನಂ.71/2 ನಮಗೆ ಸೇರಿರುತ್ತದೆ ಎಂದು ದಾವೆ ಸಲ್ಲಿಸಿರುತ್ತಾರೆ. ವಾದಿಯ ತಂದೆಯ ಹೆಸರು ಚಂದ್ರಶೇಖರ್ ಉಃ ಚಂದ್ರಶೇಖರಯ್ಯ ಎಂದರೆ ಸರಿ. ಸದರಿ ಚಂದ್ರಶೇಖರಯ್ಯ ರವರ ತಂದೆ ಹೆಸರು ರುದ್ರಯ್ಯ ತಾಯಿ ಶಾಂತಮ್ಮ ಎಂದರೆ ಸರಿ. ದಾವಾ ಸ್ವತ್ತು ಮೂಲತಃ ರುದ್ರಯ್ಯರವರು ದಿ.13.04.1955 ರಲ್ಲಿ ಬಸವಯ್ಯರವರಿಂದ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ವಾದ ಪತ್ರದಲ್ಲಿರುವ ಅಂಶಗಳನ್ನು ತಿಳಿದುಕೊಂಡಿದ್ದೀರ ಎಂದರೆ ಇಲ್ಲ. ಸಾಕ್ಷಿಗೆ ಒಂದು ದಾಖಲಾತಿ ತೋರಿಸಲಾಗಿ ಸದರಿ ಕ್ರಯ ಪತ್ರದಲ್ಲಿ ರುದ್ರಯ್ಯ ರವರು ಸ.ನಂ.71/2 ರ 27 ಗುಂಟೆ ಜಮೀನನ್ನು ಬಸವಯ್ಯರವರಿಂದ ಖರೀದಿಸಿರುವುದಾಗಿ ನಮೂದಿರುತ್ತದೆ ಎಂದರೆ ನಮೂದಿರುತ್ತದೆ ಆದರೆ ಸದರಿ ದಾಖಲಾತಿ ಬಗ್ಗೆ ಮಾಹಿತಿ ಇರುವುದಿಲ್ಲ. ಸದರಿ ಕ್ರಯಪತ್ರ ಸತ್ಯವಾಗಿರುತ್ತದೆಯೋ ಇಲ್ಲವೋ ಎಂದು ತಿಳಿದುಕೊಳ್ಳಲು ಪ್ರಯತ್ನಿಸಿದ್ದೀರ ಎಂದರೆ ಪ್ರಯತ್ನಿಸಿರುವುದಿಲ್ಲ. ನಾನು ಪೊಲೀಸ್ ಆಗಿ 2009 ರಿಂದ ಕೆಲಸ ಮಾಡುತ್ತಿದ್ದೇನೆ.

2. ನನ್ನ ತಕರಾರಿನಲ್ಲಿ ಮತ್ತು ಮುಖ್ಯ ವಿಚಾರಣೆಯಲ್ಲಿ ವಾದಿಯು ದಾವಾ ಸ್ವತ್ತಿನ 1980 ನೇ ಸಾಲಿನ ಪೂರ್ವದಲ್ಲಿ ಮಾಲೀಕರು ಎಂದು ಬರೆಸಿರುತ್ತೇನೆ ಎಂದರೆ ಸರಿ. ವಾದಿಗೆ ಎಂ.ಆರ್. 4/87-88 ರಡಿಯಲ್ಲಿ ಅವರ ತಂದೆ ಹೆಸರಿಗೆ ಖಾತೆಯಾಗಿರುತ್ತದೆ ಎಂದರೆ ಸರಿ. ಎಂ.ಆರ್.3/86-87 ರಂತೆ ದಾವಾ ಸ್ವತ್ತಿನ ಖಾತೆಯು ವಾದಿಯ ತಂದೆ ಹೆಸರಿಗೆ ಆಗಿರುತ್ತದೆ ಎಂದರೆ ಸರಿ. ಯಾವ ಆಧಾರದ ಮೇಲೆ ಎಂ.ಆರ್.1/89-90 ರಂತೆ

ಖಾತೆಯು ನನ್ನ ತಂದೆ ಹೆಸರಿಗೆ ಆಗಿರುತ್ತದೆ ಎಂದರೆ ಸ್ವಾಧೀನದ ಅಧಾರದ ಮೇಲೆ. ಸ್ವಾಧೀನದ ಅಧಾರದ ಮೇಲೆ ಖಾತೆ ಆಗಿರುತ್ತದೆ ಎಂದು ತೋರಿಸಲು ದಾಖಲಾತಿ ಇದೆಯೇ ಎಂದರೆ ಇರುತ್ತದೆ. ನಿಡಿ 2 ಮ್ಯುಟೇಷನ್ ರಲ್ಲಿ ಸ್ವಾಧೀನದ ಆಧಾರದ ಮೇಲೆ ಎಂದು ನಮೂದಿಸಿರುತ್ತಾರ ಎಂದರೆ ಸಾಕ್ಷಿ ನಿಡಿ 2 ನೋಡಿ ಸರಿಯಾಗಿ ತಿಳಿದುಬರುತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಹಾಜರುಪಡಿಸಿರುವ ನಿಶಾನೆಗಳಲ್ಲಿ ವಾದಿ, ಅವರ ತಂದೆ, ಅಜ್ಜ ಹೆಸರಿನಲ್ಲಿದೆ ಎಂದರೆ ಸರಿ.

3. ಸಾಕ್ಷಿಗೆ ಕಡತದಲ್ಲಿರುವ ಎರಡು ಕೈಬರಹ ಪಹಣಿಗಳನ್ನು ತೋರಿಸಿದ್ದು ಅವುಗಳನ್ನು ನಾನೇ ಹಾಜರುಪಡಿಸಿರುತ್ತೇನೆ ಎಂದರೆ ಸರಿ. ಆದ ಕಾರಣ ಸದರಿ ದಾಖಲಾತಿಗಳನ್ನು ನಿಡಿ 3 ಮತ್ತು 4 ಎಂದು ಗುರುತಿಸಲಾಯಿತು. ನಿಡಿ 3 ರಲ್ಲಿ ಲೋಲಾಕ್ಷಿ ಬಿನ್ ಚಂದ್ರಶೇಖರಯ್ಯ ಎಂದು ನಮೂದಿರುತ್ತದೆ ಎಂದರೆ ಸರಿ. ಸದರಿ ಲೋಲಾಕ್ಷಿ ವಾದಿಯ ತಾಯಿ ಎಂದರೆ ಸರಿ. ದಾವಾ ಸ್ವತ್ತಿನ ಖಾತೆ ವಾದಿಯ ಅಪ್ರಾಪ್ತ ವಯಸ್ಕರಾಗಿದ್ದ ಕಾರಣ ಗಾರ್ಡಿಯನ್ ಆಗಿ ಅವರ ತಾಯಿ ಹೆಸರಿಗೆ ಬಂದಿರುತ್ತದೆ ಎಂದರೆ ಸರಿ. ನಿಡಿ 4 ರಲ್ಲಿ ಚಂದ್ರಶೇಖರಯ್ಯ ಬಿನ್ ರುದ್ರಯ್ಯ ಎಂದು ನಮೂದಿರುತ್ತದೆ ಎಂದರೆ ಸರಿ. ನಮ್ಮ ತಾತನ ಹೆಸರೂ ಸಹ ಇರುತ್ತದೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ನನ್ನ ತಂದೆ ಹೆಸರಿಗೆ ಖಾತೆಯನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಸ್ವಾಧೀನದಲ್ಲಿ ನನ್ನ ತಾತ ಇಲ್ಲದಿದ್ದರೂ ನಿಡಿ 4 ರಲ್ಲಿ ಅವರ ಹೆಸರು ಸೇರಿಸಿರುತ್ತೇವೆ ಎಂದರೆ ಸರಿಯಲ್ಲ. ಪಹಣಿ ಹೊರತುಪಡಿಸಿ ನಮ್ಮ ಕುಟುಂಬದವರ ಹೆಸರಿನಲ್ಲಿ ಯಾವುದೇ ಮೂಲ ದಾಖಲಾತಿ ಇರುವುದಿಲ್ಲ ಎಂದರೆ ಸರಿ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ಒ.ಎಸ್.124/16 ನ್ನು ವಾದಿ ವಿರುದ್ಧ ಇದೇ ದಾವೆ ಸರ್ವೆ ನಂ.ಗೆ ಸಂಬಂಧಪಟ್ಟಂತೆ ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿ. ಸದರಿ ದಾವೆಯಲ್ಲಿ ಸ್ವತ್ತು ಪಿತ್ರಾರ್ಜಿತ ಸ್ವತ್ತು ಎಂದು ನಮೂದಿಸಿರುತ್ತೇವೆ ಎಂದರೆ ನನ್ನ ತಂದೆಗೆ ಹಿಸ್ಸೆಯಲ್ಲಿ ಬಂದಂತಹ ಪಿತ್ರಾರ್ಜಿತ ಸ್ವತ್ತಾಗಿರುತ್ತದೆ. ಸದರಿ ಸ್ವತ್ತು ನಮ್ಮ ಪಿತ್ರಾರ್ಜಿತ ಸ್ವತ್ತಾಗಿರುವುದಿಲ್ಲ ಎಂದರೆ ಸರಿಯಲ್ಲ. ಈ

ದಾವೆಯಲ್ಲಿ ತೆಗೆದುಕೊಂಡಿರುವ ಪ್ರತಿಕೂಲ ಎಂಬ ಅಂಶಕ್ಕೂ ಓ.ಎಸ್.124/16 ರಲ್ಲಿ ವಾದ ಪತ್ರದಲ್ಲಿ ತೆಗೆದುಕೊಂಡಿರುವ ಪಿತ್ರಾರ್ಜಿತ ಅಂಶಕ್ಕೂ ವ್ಯತಿರಿಕ್ತವಾಗಿರುತ್ತದೆ ಎಂದರೆ ಸರಿಯಲ್ಲ. ಓ.ಎಸ್.456/18 ರಂತೆ 4 ಮತ್ತು 5ನೇ ಪ್ರತಿವಾದಿಗಳ ವಿರುದ್ಧ ಇದೇ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿ. ನಿಪಿ 11 ಓ.ಎಸ್.456/18 ರ ವಾದ ಪತ್ರ ಎಂದರೆ ಸರಿ. ಸದರಿ ದಾವೆಯಲ್ಲಿ ದಾವಾ ಸ್ವತ್ತು ನನ್ನ ತಾಯಿಯ ಮಾವನ ಪಿತ್ರಾರ್ಜಿತ ಸ್ವತ್ತು ಎಂದು ತಿಳಿಸಿರುತ್ತೇವೆ ಎಂದರೆ ಸರಿ. ನಿಪಿ 11 ಮತ್ತು 12 ರಲ್ಲಿ ವಾದ ಪತ್ರಗಳಲ್ಲಿ ಪ್ರತಿಕೂಲ ಸ್ವಾಧೀನದ ಬಗ್ಗೆ ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ.ದಾವಾ ಸ್ವತ್ತಿನ ಪ್ರತಿಕೂಲ ಸ್ವಾಧೀನದಲ್ಲಿ ನಾವು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಸ್ವಾಧೀನದಲ್ಲಿ 4 ಮತ್ತು 5ನೇ ಪ್ರತಿವಾದಿಗಳು ಇರುತ್ತಾರೆ ಎಂದರೆ ಸರಿಯಲ್ಲ.

5. 2015 ರಲ್ಲಿ ನನ್ನ ತಂದೆಗೆ ಕ್ಯಾನ್ಸರ್ ಖಾಯಿಲೆ ಇರುತ್ತದೆ ಎಂದರೆ ಸರಿ. ಆ ಸಂಧರ್ಭದಲ್ಲಿ ವಾದಿಯು ನನ್ನ ತಂದೆಗೆ ಖಾತೆ ಮಾಡಿಕೊಡುವುದಾಗಿ ಕೇಳಿ ಕೊಡುವುದಾಗಿ ನನ್ನ ತಂದೆ ಒಪ್ಪಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಿ.21.11.2015 ರಂದು ನನ್ನ ತಂದೆ ಮರಣ ಹೊಂದಿರುತ್ತಾರೆ ಎಂದರೆ ಸರಿ. ನಂತರ ನನ್ನನ್ನು ಮತ್ತು ನನ್ನ ತಾಯಿಯನ್ನು ವಾದಿ ಖಾತೆ ಮಾಡಿಕೊಡುವುದಾಗಿ ಕೇಳಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ತೀರಿಕೊಂಡ ನಂತರ ಖಾತೆಗಾಗಿ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿ. ವಾದಿ ವಕೀಲರ ಮುಖಾಂತರ ರೆವಿನ್ಯೂ ಅಧಿಕಾರಿಗಳಿಗೆ ದಿ.07.04.2016 ರಂದು ತಕರಾರು ನೋಟೀಸ್ ಸಲ್ಲಿಸಿರುತ್ತಾರೆ ಎಂದರೆ ಸರಿ. ನೋಟೀಸ್ ನೀಡಿದ ನಂತರ ನಾನು ಮತ್ತು 4 ಮತ್ತು 5ನೇ ಪ್ರತಿವಾದಿಗಳು ವಾದಿಯಿಂದ ದಾವಾ ಸ್ವತ್ತಿನ ಸ್ವಾಧೀನ ಕಿತ್ತುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಓ.ಎಸ್.124/16 ರಲ್ಲಿ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

6. ವಾದಿಯು ನಮ್ಮ ವಿರುದ್ಧ ದೂರು ಸಲ್ಲಿಸಿದ್ದರೂ ನಾವು ಸ್ವಾಧೀನ ಬಿಟ್ಟುಕೊಡದ ಕಾರಣ ಈ ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಮೇಲೆ ನಮಗೆ ಹಕ್ಕಿರುವುದಿಲ್ಲ ಕೇವಲ ವಾದಿಗೆ ಮಾತ್ರ ಇರುತ್ತದೆ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕೇಳಿರುವ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಸ್ನೇಹ ಎಂ.)
ವ್ಯವಹಾರ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ., ಆಲೂರು.